ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ ಎ Part – IV A	ಬೆಂಗಳೂರು, ಸೋಮವಾರ, ೧೯, ಅಕ್ಟೋಬರ್, ೨೦೨೦ (ಆಶ್ವಯುಜ , ೨೭, ಶಕವರ್ಷ ೧೯೪೨) BENGALURU, MONDAY, 19, OCTOBER, 2020 (ASHWAYUJA, 27, SHAKAVARSHA, 1942)	ನಂ. ೪೬೮ No. 468

DEPARTMENT OF PARLIAMENTARY AFFAIRS AND LEGISLATION SECRETARIAT

NOTIFICATION

NO: DPAL 71 SHASANA 2020, BENGALURU, DATED:19.10.2020

The Karnataka Town and Country Planning (Third Amendment) Bill, 2020 ಇದಕ್ಕೆ 2020ರ ಅಕ್ಟೋಬರ್ ತಿಂಗಳ 16ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 34 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

KARNATAKA ACT NO. 34 OF 2020

(First published in the Karnataka Gazette Extra-ordinary on the 19th day of October, 2020)

THE KARNATAKA TOWN AND COUNTRY PLANNING (THIRD AMENDMENT) ACT, 2020

(Received the assent of the Governor on the 16th day of October, 2020)

An Act further to amend the Karnataka Town and Country Planning Act, 1961.

Whereas it is expedient further to amend the Karnataka Town and Country Planning Act, 1961 (Karnataka Act 11 of 1963) for the purposes hereinafter appearing;

Be it enacted by the Karnataka State Legislature in the seventy first year of the Republic of India, as follows:-

1. Short title and commencement.- (1) This Act may be called the Karnataka Town and Country Planning (Third Amendment) Act, 2020.

(2) It shall be deemed to have come into force with effect from the 22nd day of May, 2020.

2. Amendment of section 17.- In the Karnataka Town and Country Planning Act, 1961 (Karnataka Act 11 of 1963)(hereinafter referred to as the principal Act), in section 17,-

(i) in the heading, for the words "sub-division", the words "single plot or sub-division" shall be substituted;

(ii) in sub section (1), after the words "Every person who intends to" the words "develop a single plot or" shall be inserted;

(iii) in sub section (2A),-

(a) for the word "park" the words "park and play ground" shall be substituted;

(b) for the word "parks" the words "parks and play ground" shall be substituted; and

(iv) after sub section (2B), the following shall be inserted, namely:-

"(2-C) (i) The Planning Authority, if the developer of the layout so desires, may also permit development of layout in phases. In such a case, the developer shall submit a phasing plan along with the provisional plan showing the development of the layout area in three phases, indicating development of forty percent of the layout area in the first phase, thirty percent of the layout area in the second phase and the remaining thirty percent of the layout in the third phase.

(ii) The Planning Authority shall release all building sites in the first phase of the layout, that is forty percent of the total layout area, after the relinquishment of roads, parks and playground and civic amenity areas of the entire layout area without claiming any compensation as specified in sub-section (2-A) and after completion of all infrastructure development works in the first phase as specified in Table-A below and after obtaining certificate of completion for the above said works from the concerned Authority/ Agency/ Department/ Corporation specified in Table-B below. A copy of the first phase layout plan affixing the seal of the Planning Authority showing the building sites released for transfer of title to the allottee by the developer by registration and a copy shall be sent to the local authority for issue of Khata to the sites.

(iii) The Planning Authority shall release all building sites in the second phase of the layout, that is thirty percent of the total layout area, after completion of all infrastructure development works in the second phase as specified in Table-A below and after obtaining certificate of completion for the above said works from the concerned Authority/ Agency/ Department/ Corporation as specified in Table-B below. A copy of the second phase layout plan affixing the seal of the Planning Authority showing the building sites released for transfer title to the allottee by the developer by registration and a copy shall be sent to the local authority for issue of the Khata to the sites.

(iv) The Authority shall approve the final layout plan releasing the remaining thirty percent of building sites on completion of all infrastructure development works in the third phase as specified in the Table-A below and after obtaining certificate of completion for the above said works from the concerned Authority/

Agency/ Department/ Corporation as specified in the Table-B below. A copy of the final layout plan affixing the seal of the Planning Authority showing the building sites released for transfer of title to the allottee by the developer by registration and a copy shall be sent to the local authority for issue of the Khata to the sites.

(v) The building sites mentioned in sub-clause (ii) of sub section (2-C) shall be released only after registration of the project under The Real Estate (Regulation and Development) Act, 2016 (Central Act 16 of 2016).

(vi) The inspection for certification of all the development works in each of the three phases shall be conducted jointly by all the concerned Authorities/ Agencies/ Departments/Corporations.

(vii) Any building site which has not been released by the Planning Authority shall not be issued any Khata or given property index number (e-khata) under The Karnataka Municipalities Act, 1964, the Karnataka Municipal Corporations Act, 1976 and the Karnataka Gram Swaraj and Panchayat Raj Act, 1993.

(viii) The development works specified in sub clause (ii), (iii) and (iv) above shall be as specified in table below.-

TABLE-A

{see sub-section (2-C)(ii)(iii)(iv)}

Development Works to be completed	**Condition before release of sites**
1. Formation, Metalling, Asphalting/ concreting of roads and cross drainage works along with pavements, construction of storm water drains 2. Completion of water supply works including laying of water supply pipelines, construction of water tank/s and individual connections to building sites. 3. Completion of underground drainage works including laying of underground drainage lines, construction of sewage treatment plant/ soak pit and individual connections to building sites. 4. Development of parks and playgrounds and open spaces	Certificate of completion from the concerned Authority/ Agency/ Department/Corporation*

5. Laying out of underground cables (if developer intends to lay underground cables) 6. Completion of electrical work including erection of street lighting poles, erection of transformers and connections for street lighting 7. Rain water harvesting 8. Tree planting	

TABLE-B

***Concerned agency to issue certificate of completion/ no objection certificate for different development works**

Road works	Urban areas: Urban local bodies Outside Urban limits: Panchayat Raj Engineering Dept.
Water Supply/ Underground Drainage works	BWSSB limit: BWSSB Other urban areas: Karnataka Urban Water Supply and Drainage Board (KUWS and DB) Outside Urban limits: Rural Water Supply Dept.
Electrical works	Concerned ESCOMs

3. Repeal and savings.- (1) The Karnataka Town and Country Planning (Amendment) Ordinance, 2020 (Karnataka Ordinance 09 of 2020) is hereby repealed.

(2) Notwithstanding such repeal, anything done or any action taken under the principal Act, as amended by the said Ordinance, shall be deemed to have been done or taken under principal Act, as amended by this Act.

By Order and in the name of
the Governor of Karnataka,

(K.DWARAKANATH BABU)
Secretary to Government
Department of Parliamentary Affairs
and Legislation

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 71 ಶಾಸನ 2020, ಬೆಂಗಳೂರು, ದಿನಾಂಕ:19.10.2020.

The Karnataka Town and Country Planning (Third Amendment) Bill, 2020 ಇದಕ್ಕೆ 2020ರ ಅಕ್ಟೋಬರ್ ತಿಂಗಳ 16ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 34 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 34

(2020 ರ ಅಕ್ಟೋಬರ್ ತಿಂಗಳ 19 ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಮೂರನೇ ತಿದ್ದುಪಡಿ) ಅಧಿನಿಯಮ, 2020

(2020 ರ ಅಕ್ಟೋಬರ್ ತಿಂಗಳ 16 ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ನ್ನು (1963ರ ಕರ್ನಾಟಕ ಅಧಿನಿಯಮ 11) ಮತ್ತಷ್ಟು ತಿದ್ದುಪಡಿ ಮಾಡಲು ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ನ್ನು (1963ರ ಕರ್ನಾಟಕ ಅಧಿನಿಯಮ 11) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಮೂರನೇ ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು 2020ರ ಮೇ 22ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 17ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 17ನೇ ಪ್ರಕರಣದಲ್ಲಿ,-

(i) ಶೀರ್ಷಿಕೆಯಲ್ಲಿ "ಒಳ ವಿಭಾಗ" ಎಂಬ ಪದಗಳಿಗೆ "ಒಂದೇ ಪ್ಲಾಟು ಅಥವಾ ಒಳ ವಿಭಾಗ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (1)ನೇ ಉಪಪ್ರಕರಣದಲ್ಲಿ "ನಿರ್ಮಾಣ ಮಾಡುವ ಮೂಲಕ ತನ್ನ ಪ್ಲಾಟನ್ನು" ಎಂಬ ಪದಗಳ ತರುವಾಯ "ಒಂದೇ ಪ್ಲಾಟನ್ನಾಗಿ ಅಭಿವೃದ್ಧಿಪಡಿಸಲು ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು;

(iii) (2ಎ) ಉಪಪ್ರಕರಣದಲ್ಲಿ,-

(ಎ) "ಉದ್ಯಾನ" ಎಂಬ ಪದಕ್ಕೆ "ಉದ್ಯಾನ ಹಾಗೂ ಆಟದ ಮೈದಾನ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಉದ್ಯಾನಗಳನ್ನು" ಎಂಬ ಪದಗಳಿಗೆ "ಉದ್ಯಾನಗಳನ್ನು ಹಾಗೂ ಆಟದ ಮೈದಾನವನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(iv) (2ಬಿ) ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2ಸಿ) (i) (ಬಡಾವಣೆಯ ಅಭಿವೃದ್ಧಿಕಾರನು (ಡೆವಲಪರ್) ಇಚ್ಛಿಸಿದಲ್ಲಿ, ಯೋಜನಾ ಪ್ರಾಧಿಕಾರವು ಹಂತಗಳಲ್ಲಿಯೂ (Phases) ಸಹ ಬಡಾವಣೆಯ ಅಭಿವೃದ್ಧಿಯನ್ನು ಅನುಮತಿಸಬಹುದು. ಅಂಥ ಪ್ರಕರಣದಲ್ಲಿ, ಅಭಿವೃದ್ಧಿಕಾರನು ಮೂರು ಹಂತಗಳಲ್ಲಿ ಬಡಾವಣೆ ಪ್ರದೇಶದ ಅಭಿವೃದ್ಧಿಯನ್ನು ತೋರಿಸುವ, ಮೊದಲ ಹಂತದಲ್ಲಿ ಬಡಾವಣೆ ಪ್ರದೇಶದ ಶೇಕಡ ನಲವತ್ತು ಭಾಗ ಅಭಿವೃದ್ಧಿಯನ್ನು ಸೂಚಿಸುವ, ಎರಡನೇ ಹಂತದಲ್ಲಿ ಬಡಾವಣೆ ಪ್ರದೇಶದ ಶೇಕಡ ಮೂವತ್ತು ಭಾಗ ಅಭಿವೃದ್ಧಿಯನ್ನು ಸೂಚಿಸುವ ಹಾಗೂ ಮೂರನೇ ಹಂತದಲ್ಲಿ ಬಡಾವಣೆ ಪ್ರದೇಶದ ಉಳಿದಿರುವ ಶೇಕಡ ಮೂವತ್ತು ಭಾಗ ಅಭಿವೃದ್ಧಿಯನ್ನು ಸೂಚಿಸುವ ತಾತ್ಕಾಲಿಕ ಯೋಜನೆಯೊಂದಿಗೆ ಹಂತಾನುಹಂತ ಯೋಜನೆಯನ್ನು ಸಲ್ಲಿಸತಕ್ಕದ್ದು.

(ii) ಯೋಜನಾ ಪ್ರಾಧಿಕಾರವು ಬಡಾವಣೆಯ ಮೊದಲ ಹಂತದಲ್ಲಿನ ಅಂದರೆ ಒಟ್ಟು ಬಡಾವಣೆ ಪ್ರದೇಶದ ಶೇಕಡ ನಲವತ್ತರಷ್ಟರ, ಎಲ್ಲಾ ಕಟ್ಟಡ ನಿವೇಶನಗಳನ್ನು, ಸಂಪೂರ್ಣ ಬಡಾವಣೆ ಪ್ರದೇಶದ ರಸ್ತೆಗಳು, ಉದ್ಯಾನಗಳು ಮತ್ತು ಆಟದ ಮೈದಾನ ಹಾಗೂ ನಾಗರೀಕ ಸೌಲಭ್ಯ ಪ್ರದೇಶಗಳಿಗೆ ಸ್ವಾಧೀನ ಬಿಟ್ಟುಕೊಡುವಿಕೆಯ ತರುವಾಯ, (2ಎ) ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಯಾವುದೇ ನಷ್ಟ ಪರಿಹಾರವನ್ನು ಕ್ಲೇಮು ಮಾಡದೆಯೇ ಮತ್ತು ಕೆಳಗಿನ ಕೋಷ್ಟಕ-ಎ ನಲ್ಲಿ ನಿರ್ದಿಷ್ಟಪಡಿಸಿದಂತೆ ಎರಡನೇ ಹಂತದಲ್ಲಿನ ಎಲ್ಲಾ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ತರುವಾಯ ಹಾಗೂ ಮೇಲೆ ಹೇಳಲಾದ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಬಗ್ಗೆ ಕೆಳಗಿನ ಕೋಷ್ಟಕ-ಬಿ ನಲ್ಲಿ ನಿರ್ದಿಷ್ಟಪಡಿಸಿದ ಸಂಬಂಧಿತ ಪ್ರಾಧಿಕಾರ/ ಏಜೆನ್ಸಿ/ ಇಲಾಖೆ/ ನಿಗಮ ಗಳಿಂದ ಪ್ರಮಾಣಪತ್ರವನ್ನು ಪಡೆದ ತರುವಾಯ ಬಿಡುಗಡೆಗೊಳಿಸತಕ್ಕದ್ದು. ನೋಂದಣಿಯ ಮೂಲಕ ಅಭಿವೃದ್ಧಿಕಾರನಿಂದ ಹಂಚಿಕೆಗೊಂಡವನಿಗೆ ಹಕ್ಕನ್ನು ವರ್ಗಾಯಿಸುವುದಕ್ಕಾಗಿ ಕಟ್ಟಡ ನಿವೇಶನಗಳನ್ನು ತೋರಿಸುವ, ಯೋಜನಾ ಪ್ರಾಧಿಕಾರದ ಮೊಹರು ಲಗತ್ತಾದ ಮೊದಲ ಹಂತದ ಬಡಾವಣೆ ನಕ್ಷೆಯ ಪ್ರತಿಯನ್ನು ಬಿಡುಗಡೆಗೊಳಿಸುವುದು ಹಾಗೂ ನಿವೇಶನಗಳಿಗೆ ಖಾತೆಯನ್ನು ನೀಡುವುದಕ್ಕಾಗಿ ಒಂದು ಪ್ರತಿಯನ್ನು ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(iii) ಯೋಜನಾ ಪ್ರಾಧಿಕಾರವು ಬಡಾವಣೆಯ ಮೊದಲ ಹಂತದಲ್ಲಿನ ಅಂದರೆ ಒಟ್ಟು ಬಡಾವಣೆ ಪ್ರದೇಶ ಶೇಕಡ ಮೂವತ್ತರಷ್ಟರ, ಎಲ್ಲಾ ಕಟ್ಟಡ ನಿವೇಶನಗಳನ್ನು, ಕೆಳಗಿನ ಕೋಷ್ಟಕ-ಎ ನಲ್ಲಿ ನಿರ್ದಿಷ್ಟಪಡಿಸಿದಂತೆ ಎರಡನೇ ಹಂತದಲ್ಲಿನ ಎಲ್ಲಾ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ತರುವಾಯ ಹಾಗೂ ಮೇಲೆ ಹೇಳಲಾದ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಬಗ್ಗೆ ಕೆಳಗಿನ ಕೋಷ್ಟಕ-ಬಿ ನಲ್ಲಿ ನಿರ್ದಿಷ್ಟಪಡಿಸಿದ ಸಂಬಂಧಿತ ಪ್ರಾಧಿಕಾರ/ ಏಜೆನ್ಸಿ/ ಇಲಾಖೆ/ ನಿಗಮ ಗಳಿಂದ ಪ್ರಮಾಣಪತ್ರವನ್ನು ಪಡೆದ ತರುವಾಯ ಬಿಡುಗಡೆಗೊಳಿಸತಕ್ಕದ್ದು. ನೋಂದಣಿಯ ಮೂಲಕ ಅಭಿವೃದ್ಧಿಕಾರನಿಂದ ಹಂಚಿಕೆಗೊಂಡವನಿಗೆ ಹಕ್ಕನ್ನು ವರ್ಗಾಯಿಸುವುದಕ್ಕಾಗಿ ಕಟ್ಟಡ ನಿವೇಶನಗಳನ್ನು ತೋರಿಸುವ, ಯೋಜನಾ ಪ್ರಾಧಿಕಾರದ ಮೊಹರು ಲಗತ್ತಾದ ಎರಡನೇ ಹಂತದ ಬಡಾವಣೆ ನಕ್ಷೆಯ ಪ್ರತಿಯನ್ನು ಬಿಡುಗಡೆಗೊಳಿಸುವುದು ಹಾಗೂ ನಿವೇಶನಗಳಿಗೆ ಖಾತೆಯನ್ನು ನೀಡುವುದಕ್ಕಾಗಿ ಒಂದು ಪ್ರತಿಯನ್ನು ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(iv) ಪ್ರಾಧಿಕಾರವು ಉಳಿದಿರುವ ಶೇಕಡ ಮೂವತ್ತರಷ್ಟರ ಕಟ್ಟಡ ನಿವೇಶನಗಳನ್ನು ಬಿಡುಗಡೆಗೊಳಿಸಿ ಕೆಳಗಿನ ಕೋಷ್ಟಕ-ಎ ನಲ್ಲಿ ನಿರ್ದಿಷ್ಟಪಡಿಸಿದಂತೆ ಮೂರನೇ ಹಂತದಲ್ಲಿನ ಎಲ್ಲಾ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ತರುವಾಯ ಹಾಗೂ ಮೇಲೆ ಹೇಳಲಾದ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಬಗ್ಗೆ ಕೆಳಗಿನ ಕೋಷ್ಟಕ-ಬಿ ನಲ್ಲಿ ನಿರ್ದಿಷ್ಟಪಡಿಸಿದ ಸಂಬಂಧಿತ ಪ್ರಾಧಿಕಾರ/ ಏಜೆನ್ಸಿ/ ಇಲಾಖೆ/ ನಿಗಮ ಗಳಿಂದ ಪ್ರಮಾಣಪತ್ರವನ್ನು ಪಡೆದ ತರುವಾಯ ಅಂತಿಮ ಬಡಾವಣೆ ನಕ್ಷೆಯನ್ನು ಅನುಮೋದಿಸತಕ್ಕದ್ದು. ನೋಂದಣಿಯ ಮೂಲಕ ಅಭಿವೃದ್ಧಿಕಾರನಿಂದ ಹಂಚಿಕೆಗೊಂಡವನಿಗೆ ಹಕ್ಕನ್ನು ವರ್ಗಾಯಿಸುವುದಕ್ಕಾಗಿ ಕಟ್ಟಡ ನಿವೇಶನಗಳನ್ನು ತೋರಿಸುವ, ಯೋಜನಾ ಪ್ರಾಧಿಕಾರದ ಮೊಹರು ಲಗತ್ತಾದ ಹಂತಿಮ ಹಂತದ ಬಡಾವಣೆ ನಕ್ಷೆಯ ಪ್ರತಿಯನ್ನು ಬಿಡುಗಡೆಗೊಳಿಸುವುದು ಹಾಗೂ ನಿವೇಶನಗಳಿಗೆ ಖಾತೆಯನ್ನು ನೀಡುವುದಕ್ಕಾಗಿ ಒಂದು ಪ್ರತಿಯನ್ನು ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(v) (2ಸಿ) ಉಪ ಪ್ರಕರಣದ (ii)ನೇ ಉಪಖಂಡದಲ್ಲಿ ನಮೂದಿಸಿದ ಕಟ್ಟಡ ನಿವೇಶನಗಳನ್ನು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016ರ (2016ರ ಕೇಂದ್ರ ಅಧಿನಿಯಮ 16) ಅಡಿಯಲ್ಲಿ ಯೋಜನೆಯ ನೋಂದಣಿ ತರುವಾಯ ಮಾತ್ರವೇ ಬಿಡುಗಡೆಗೊಳಿಸತಕ್ಕದ್ದು.

(vi) ಪ್ರತಿ ಮೂರು ಹಂತಗಳಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಪ್ರಮಾಣಪತ್ರ ನೀಡುವುದಕ್ಕಾಗಿ ಪರಿಶೀಲನೆಯನ್ನು ಎಲ್ಲಾ ಸಂಬಂಧಿತ ಪ್ರಾಧಿಕಾರ/ ಏಜೆನ್ಸಿಗಳು/ ಇಲಾಖೆ/ ನಿಗಮಗಳು ಜಂಟಿಯಾಗಿ ನಡೆಸತಕ್ಕದ್ದು.

(vii) ಯೋಜನಾ ಪ್ರಾಧಿಕಾರದಿಂದ ಬಿಡುಗಡೆಯಾಗದಿರುವ ಯಾವುದೇ ಕಟ್ಟಡ ನಿವೇಶನಕ್ಕೆ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964, ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿಯಲ್ಲಿ ಯಾವುದೇ ಖಾತೆ ಅಥವಾ ಸ್ವತ್ತು ಸೂಚಕ ಸಂಖ್ಯೆಯನ್ನು (ಇ-ಖಾತಾ) ನೀಡತಕ್ಕದ್ದಲ್ಲ.

(viii) ಮೇಲಿನ (ii), (iii) ಮತ್ತು (iv)ನೇ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅಭಿವೃದ್ಧಿ ಕಾಮಗಾರಿಗಳು ಈ ಕೆಳಗಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

ಕೋಷ್ಟಕ-ಎ

{[2-ಸಿ(ii)(iii)(iv)] ಉಪಪ್ರಕರಣ ನೋಡಿ}

ಪೂರ್ಣಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳು	**ನಿವೇಶನಗಳ ಬಿಡುಗಡೆಗೆ ಮೊದಲ ಪರತ್ತು**
1. ಪಾದಚಾರಿ ಮಾರ್ಗಗಳು, ಮಳೆನೀರು ಚರಂಡಿಗಳ ನಿರ್ಮಾಣದೊಂದಿಗೆ ರಸ್ತೆಗಳು ಮತ್ತು ಅಡ್ಡ ಒಳಚರಂಡಿ ಕಾಮಗಾರಿಗಳ ರಚನೆ, ಮೆಟಲಿಂಗ್, ಅಸ್ಫಾಲ್ಟಿಂಗ್/ಕಾಂಕ್ರೀಟಿಂಗ್	ಸಂಬಂಧಪಟ್ಟ ಪ್ರಾಧಿಕಾರ/ಏಜೆನ್ಸಿ/ಇಲಾಖೆ/ಪಾಲಿಕೆ* ಇಂದ ಸಂಪೂರ್ಣಗೊಂಡ ಬಗ್ಗೆ ಪ್ರಮಾಣಪತ್ರ
2. ನೀರು ಸರಬರಾಜು ಪೈಪ್‌ಲೈನ್‌ಗಳು, ನೀರಿನ ತೊಟ್ಟಿ/ತೊಟ್ಟಿಗಳ ನಿರ್ಮಾಣ ಮತ್ತು ಕಟ್ಟಡ ನಿವೇಶನಗಳಿಗೆ ವೈಯಕ್ತಿಕ ಸಂಪರ್ಕಗಳನ್ನು ಹಾಕುವುದು ಒಳಗೊಂಡಂತೆ ನೀರು ಸರಬರಾಜು ಕಾಮಗಾರಿಗಳನ್ನು ಸಂಪೂರ್ಣಗೊಳಿಸುವುದು.	
3. ಭೂಮಿಯ ಕೆಳಗಿನ ಒಳಚರಂಡಿ ಲೈನುಗಳನ್ನು ಹಾಕುವುದು, ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್/ ಸೋಕ್ ಪಿಟ್ ಮತ್ತು ಕಟ್ಟಡ ನಿವೇಶನಗಳಿಗೆ ವೈಯಕ್ತಿಕ ಸಂಪರ್ಕಗಳು ಒಳಗೊಂಡಂತೆ ಭೂಮಿಯ ಕೆಳಗಿನ ಒಳಚರಂಡಿ ಕಾಮಗಾರಿಗಳನ್ನು ಸಂಪೂರ್ಣಗೊಳಿಸುವುದು.	
4. ಉದ್ಯಾನಗಳು, ಆಟದ ಮೈದಾನಗಳು ಮತ್ತು ಮುಕ್ತ ಸ್ಥಳಗಳ ಅಭಿವೃದ್ಧಿ.	
5. ಭೂಮಿಯ ಕೆಳಗೆ ಕೇಬಲುಗಳನ್ನು ಹಾಕುವುದು. (ಅಭಿವೃದ್ಧಿದಾರನು ಭೂಮಿಯ ಕೆಳಗಿನ ಕೇಬಲುಗಳನ್ನು ಹಾಕುವುದಕ್ಕೆ ಉದ್ದೇಶಿಸಿದ್ದಲ್ಲಿ)	
6. ಬೀದಿ ದೀಪಗಳ ಕಂಬಗಳನ್ನು ನಿಲ್ಲಿಸುವುದು, ಟ್ರಾನ್ಸ್ ಫಾರ್ಮರ್‌ಗಳನ್ನು ನಿಲ್ಲಿಸುವುದು, ಬೀದಿ ದೀಪಗಳಿಗಾಗಿ [illegible] ವಿದ್ಯುಚ್ಛಕ್ತಿ	
8. ಮರ ನೆಡುವುದು.	

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

ಕೋಷ್ಟಕ-ಬಿ

***ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಪೂರ್ಣಗೊಳಿಸಿದ ಪ್ರಮಾಣಪತ್ರ/ ನಿರಾಪೇಕ್ಷಣಾ ಪ್ರಮಾಣಪತ್ರವನ್ನು ನೀಡುವ ಸಂಬಂಧಪಟ್ಟ ಏಜೆನ್ಸಿ.**

ರಸ್ತೆ ಕಾಮಗಾರಿಗಳು	ನಗರ ಪ್ರದೇಶಗಳು: ನಗರ ಸ್ಥಳೀಯ ನಿಕಾಯಗಳು ನಗರ ಮಿತಿಗಳ ಹೊರಗೆ: ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ನೀರು ಸರಬರಾಜು/ ಭೂಮಿಯ ಕೆಳಗಿನ ಒಳಚರಂಡಿ ಕಾಮಗಾರಿಗಳು	ಬಿಡಬ್ಲ್ಯೂಎಸ್ಎಸ್ಬಿ ಮಿತಿ: ಬಿಡಬ್ಲ್ಯೂಎಸ್ಎಸ್ಬಿ ಇತರ ನಗರ ಪ್ರದೇಶಗಳು: ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ.(ಕೆಯುಡಬ್ಲ್ಯೂಎಸ್ ಆಂಡ್ ಡಿಬಿ) ನಗರ ಮಿತಿಗಳ ಹೊರಗೆ: ಗ್ರಾಮೀಣ ನೀರು ಸರಬರಾಜು ಇಲಾಖೆ.
ವಿದ್ಯುಚ್ಛಕ್ತಿ ಕಾಮಗಾರಿ	ಸಂಬಂಧಪಟ್ಟ ಎಸ್ಕಾಂಗಳು

3. ನಿರಸನ ಮತ್ತು ಉಳಿಸುವಿಕೆಗಳು.- (1) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 09) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ, ಸದರಿ ಅಧ್ಯಾದೇಶದ ಮೂಲಕ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

The above translation of the Karnataka Town and Country Planning (Third Amendment) Act, 2020 (Karnataka Act 34 of 2020) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

ವಜುಬಾಯಿ ವಾಲ
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ
ಕರ್ನಾಟಕ ಸರ್ಕಾರ
ಬಹುಮಹಡಿಗಳ ಕಟ್ಟಡ, ಗೇಟ್-4
ಪಿ.ಬಿ. ನಂ. 5257
ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ
ಬೆಂಗಳೂರು-560 001
ದೂರವಾಣಿ ಸಂ.: 080-22258988

ಸಂಖ್ಯೆ: ನಗ್ರಾಯೋ:ಜಂನಿ:26:CIRC:2020-21
ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 71 ಶಾಸನ 2020,
ಬೆಂಗಳೂರು, ದಿನಾಂಕ:19-10-2020.

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ,
ಬಹುಮಹಡಿಗಳ ಕಟ್ಟಡ, 4ನೇ ಹಂತ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 29 OCT 2020

<u>ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.</u>

1. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ.
2. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು.
3. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು/ಮೈಸೂರು/ ಕಲಬುರಗಿ.
4. ಸದಸ್ಯ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳು.
5. ಆಯುಕ್ತರು, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
6. ಮುಖ್ಯಾಧಿಕಾರಿಗಳು/ಆಯುಕ್ತರು, ಪುರಸಭೆ/ನಗರಸಭೆ ಯೋಜನಾ ಪ್ರಾಧಿಕಾರಗಳು.
7. ಎಲ್ಲಾ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಗಳಿಗೆ.
8. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿ ಹಾಗೂ ತಾಂತ್ರಿಕ ಸಿಬ್ಬಂದಿಗಳಿಗೆ.
9. ಸದರಿ ಸುತ್ತೋಲೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ.
10. ಸದರಿ ಸುತ್ತೋಲೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ತಾಂತ್ರಿಕ ವಿಭಾಗದ ಇ-ಮೇಲ್ ವಿಷಯ ನಿರ್ವಾಹಕರಿಗೆ.
11. ಹೆಚ್ಚುವರಿ ಪ್ರತಿಗಳು.

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರ ಪರವಾಗಿ